ಸಾಕ್ಷಿಯನ್ನು ಇಂದು ದಿನಾಂಕ: **21-11-2021** ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು. ಪಾಟೀಸವಾಲು :
ವಾದಿ ಪರ ಶ್ರೀ ಆರ ಐ ಎಂ ವಕೀಲರಿಂದ

**1.** ನಾನು **1985** ರಲ್ಲಿ ಜನಿಸಿರುತ್ತೇನೆ. **2005** ರಲ್ಲಿ ನಾನು ಪ್ರಾಪ್ತ ವಯಸ್ಕನಾಗಿದ್ದು ಎಲ್ಲ ವಿಷಯಗಳು ಗೊತ್ತಾಗಿರುತ್ತವೆ ಅಂದರೆ ಸರಿ . **1958** ರಲ್ಲಿ ವಾದಿ ಮತ್ತು **1** ನೇ ಪ್ರತಿವಾದಿ ಮಧ್ಯ ಆದ ಪಾಲುಗಾರಿಕೆ ಬಗ್ಗೆ ನನಗೆ ಮಾಹಿತಿ ಇದೆ. ಆ ಬಗ್ಗೆ ನಾನು ದಾಖಲೆಗಳನ್ನು ನೋಡಿ ಹೇಳುತ್ತಿದ್ದೇನೆ. **1958** ರಲ್ಲಿ ವಾದಿಯ ತಂದೆ ಮತ್ತು **1** ನೇ ಪ್ರತಿವಾದಿಯ ತಂದೆಯ ಮಧ್ಯ ಆದ ವಾಟ್ನಿ ಬಗ್ಗೆ ಮಾಹಿತಿ ಇದೆ. ಆ ಸಮಯದಲ್ಲಿ ವಾದಿ **, 1** ನೇ ಪ್ರತಿವಾದಿಗೆ **25** ಎಕರೆ **11** ಗುಂಟೆ ಜಮೀನು ಇತ್ತು. ಸರ್ವೆ ನಂಬರ **405** ಒಟ್ಟು ಕ್ಷೇತ್ರ **25** ಎಕರೆ **11** ಗುಂಟೆ ಅಂದರೆ ಸರಿ . ದಿ: **01-11-1958** ರಲ್ಲಿ ಆದ ವಾಟ್ನಿಯ (ನಿ.ಡಿ **12** ) ಪ್ರಕಾರ **1** ನೇ ಪ್ರತಿವಾದಿಯ ತಂದೆ ರಾಮಸಿಂಗ ಇವರಿಗೆ ಸದರಿ ಜಮೀನಿನಲ್ಲಿ **14** ಎಕರೆ **6** ಗುಂಟೆ ಜಮೀನು ಬಂದಿರುತ್ತದೆ ಅಂದರೆ ಸರಿಯಲ್ಲ. ಅದರಂತೆ ವಾದಿಯ ತಂದೆ ಶಂಕರಸಿಂಗ ಹಜೇರಿ ಇವರಿಗೆ ಸದರಿ ಜಮೀನು ಸರ್ವೆ ನಂಬರ **405** ರಲ್ಲಿ **10** ಎಕರೆ ಬಂದಿರುತ್ತದೆ ಅಂದರೆ ಸರಿಯಲ್ಲ. ಜಮೀನು ಸರ್ವೆ ನಂಬರ **405** ಒಟ್ಟು ಕ್ಷೇತ್ರ **25** ಎಕರೆ **11** ಗುಂಟೆ ಪೈಕಿ **1** ಎಕರೆ **5** ಗುಂಟೆ ಪೋರ್ಟ ಖರಾಬ ಹೊರತುಪಡಿಸಿ ವಾಟ್ನಿ ಮಾಡಿಕೊಂಡಿದ್ದು ಅದರಲ್ಲಿ ಪ್ರತಿವಾದಿ ತಂದೆಗೆ **14** ಎಕರೆ **6** ಗುಂಟೆ ಮತ್ತು ವಾದಿಯ ತಂದೆಗೆ **10** ಎಕರೆ ಜಮೀನು ಬಂದಿದ್ದು ಅದರಂತೆ ಡ ನಂಬರ **2566** ಮಂಜೂರು ಆಗಿರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿಗೆ ನಿ.ಡಿ **12** ತೋರಿಸಿ ಅದರಲ್ಲಿ ವಾದಿಯ ತಂದೆ ಪಾಲಿಗೇ ಸರ್ವೆ ನಂಬರ **405/1** ರಲ್ಲಿ ಕ್ಷೇತ್ರ **10** ಎಕರೆ **,** ಪ್ರತಿವಾದಿಯ ತಂದೆ ಪಾಲಿಗೆ **14** ಎಕರೆ **6** ಗುಂಟ ಜಮೀನು ಬಂದಿರುತ್ತದೆ ಎಂದು ನಮೂದಿಸಿರುತ್ತಾರೆ ಅದರಂತೆ ಪೋರ್ಟ ಖರಾಬ **1** ಎಕರೆ **5** ಗುಂಟೆ ಹಾಗೆ ಇಟ್ಟಿರುವ ಬಗ್ಗೆ ನಮೂದಿಸಿರುತ್ತರೆ ಅಂದರೆ ಸರಿ ಎಂದು ಹೇಳುತ್ತಾರೆ. **1** ನೇ ಪ್ರತಿವಾದಿ **14** ಎಕರೆ **6** ಗುಂಟೆ ಜಮೀನಿನ ಪೈಕಿ ಕ್ಷೇತ್ರ **9** ಎಕರೆ **6** ಗುಂಟೆ ಸಿದ್ದಯ್ಯ ಮಠಪತಿ ಇವರಿಗೆ ಮಾರಾಟ ಮಾಡಿರುತ್ತಾರೆ ಅಂದರ ಸರಿ . ಸದರಿ ಸಿದ್ದಯ್ಯ ಮಠಪತಿ ತಾನು ಖರೀದಿಸಿದ **9** ಎಕರೆ **6** ಗುಂಟೆ ಜಮೀನು ಒಬ್ಬ ವೇಣು ತಂ ಹೀರು ಲಮಾಣಿ ಇವರಿಗೆ ಮಾರಾಟ ಮಾಡಿರುತ್ತಾರೆ ಅಂದರೆ ಸರಿ **.1** ನೇ ಪ್ರತಿವಾದಿ ಮನೆತನಕ್ಕೆ **5** ಎಕರೆ ಜಮೀನು ಉಳಿದಿರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿ ಒಟ್ಟು **6** ಎಕರೆ ಉಳಿದಿರುತ್ತದ ಎಂದು ಹೇಳುತ್ತಾರೆ. **1** ಎಕರೆ ಕ್ಷೇತ್ರ ಜಮೀನನ್ನು **1** ನೇ ಪ್ರತಿವಾದಿಯ ಸಹೋದರರು ಬಿಟ್ಟುಕೊಟ್ಟಿರುತ್ತಾರೆ ಆದರೆ ಅವರ ಹೆಸರು ಹೇಳಲು ಬರುವುದಿಲ್ಲ. ಯಾವ ವರ್ಷದಲ್ಲಿ ಬಿಟ್ಟುಕೊಟ್ಟಿರುತ್ತಾರೆ ಎಂದು ದಾಖಲೆ ಹಾಜರಪಡಿಸಿಲ್ಲ. **2010-2011** ರಲ್ಲಿ ವಾದಿ ಹೆಸರು ಕೇತ್ರ **10** ಎಕರೆ ಬದಲಾಗಿ **12** ಎಕರೆ ಪಹಣಿ ಪತ್ರಿಕೆಗಳಲ್ಲಿ ಯಾವ ಆಧಾರದ ಮೇಲೆ ನಮೂದಿಸಿರುತ್ತಾರೆ ನನಗೆ ಗೊತ್ತಿಲ್ಲ. **2013** ರಲ್ಲಿ ವಾದಿಯ ಜಮೀನು ಪಹಣಿ ಪತ್ರಿಕೆಗಳಲ್ಲಿ **30** ಗುಂಟೆ ಪೊರ್ಟ ಖರಾಬ ತಗೆದು **9** ಎಕರೆ **10** ಗುಂಟೆ ಯಾವ ಆಧಾರದ ಮೇಲೆ ತೋರಿಸಿರುತ್ತಾರೆ ಅಂದರೆ ಸಾಕ್ಷಿ ಪೋಡಿ ಹಿಸ್ಸ ಆಧಾರದ ಮೇಲೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ವಾದಿ ಹೆಸರು ಪಹಣಿ ಪತ್ರಿಕೆಗಳಲ್ಲಿ **12** ಎಕರೆ ಇರುವುದನ್ನು **10** ಎಕರೆಗೆ ಕಡಿತಗೊಳಿಸಿದ ಬಗ್ಗೆ ದಾಖಲಗೆಳನ್ನು ಹಾಜರುಪಡಿಸಿರುತ್ತೇನೆ. ಸದರಿ **2** ಎಕರೆ ಜಮೀನು ಪೋಡಿ ಹಿಸ್ಸೆ ಮಾಡುವ ಕಾಲಕೆ ವಾದಿಯ ಕ್ಷೇತ್ರದಲ್ಲಿ ಕಡಿಮೆ ಆಗಿರುತ್ತದೆ. ಆ ಬಗ್ಗೆ ಪಕ್ಷಗಾರರ ಒಪ್ಪಿಗೆ ಮೇರೆಗೆ ಪೋಡಿ ಹಿಸ್ಸ ಮಾಡಿ ಕ್ಷೇತ್ರ ಕಡಿಮೆ ಮಾಡಿದ ಬಗ್ಗೆ

ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಶಾರದಾಬಾಯಿ , ಭಾರತೀಬಾಯಿ ಮತ್ತು ಜಮುನಾಬಾಯಿ ಇವರು **1** ನೇ ಪ್ರತಿವಾದಿಯ ಅಣ್ಣನ ಮಕ್ಕಳು . ಸರ್ವೆ ನಂಬರ **405/3** ಕೇತ್ರ **5** ಎರಕೆ **5** ಗುಂಟೆ ಸದರಿ ಶಾರದಾಬಾಯಿ , ಭಾರತೀಬಾಯಿ ಮತ್ತು ಜಮುನಾಬಾಯಿ ಇವರ ಪಾಲಿಗೆ ಬಂದಿರುತದೆ ಅಂದರೆ ಸರಿ . ಶಾಂತಾಬಾಯಿ ಲಮಾಣಿ ನನ್ನ ತಾಯಿ. ನನ್ನ ತಾಯಿ ಸರ್ವೆ ನಂಬರ **405** ರಲ್ಲಿ **4** ಎಕರೆ **5** ಗುಂಟೆ ಜಮೀನು ಜಮುನಾಬಾಯಿ ಇವರಿಂದ ಖರೀದಿ ಮಾಡಿರುತ್ತಾರೆ. **1** ನೇ ಪ್ರತಿವಾದಿಯ ಕುಟುಂಬಕ್ಕೆ ಕೇವಲ **35** ಗುಂಟೆ ಜಮೀನು ಮಾತ್ರ ಉಳಿದಿರುತ್ತದೆ ಅಂದರೆ ಸಾಕ್ಷಿ **2** ಎಕರೆ ಉಳಿದಿರುತ್ತದೆ ಎಂದು ಹೇಳುತ್ತಾರೆ. **1** ನೇ ಪ್ರತಿವಾದಿಗೆ ಉಳಿದಿರುವ **35** ಗುಂಟೆ ಹಾಗೂ ಪೋರ್ಟ ಖರಾಬ **1** ಎಕರೆ **5** ಗುಂಟೆ ಹೀಗೆ ಒಟ್ಟು ಎರಡು ಎಕರೆ ನಾನು ಖರೀದಿಸಿರುತ್ತೇನೆ ಅಂದರೆ ಸರಿ ಪೋರ್ಟ ಖರಾಬ ಕೇತ್ರ **1** ಎಕರೆ **5** ಗುಂಟೆ ಜಮೀನು ವಾದಿಯ ತಂದೆ , ಪ್ರತಿವಾದಿಯ ತಂದೆ ವಾಟ್ನಿ ಮಾಡಿಕೊಂಡಿರಲಿಲ್ಲ ಅದನ್ನು ಹಾಗೆ ಉಳಿಸಿಕೊಂಡಿದ್ದರು ಅಂದರೆ ಸರಿ . ಸದರಿ ಪೋರ್ಟ ಖರಾಬ ಕೇತ್ರದಲ್ಲಿ ವಾದಿಯ ಅರ್ಧ ಹಿಸ್ಸೆ ಇದೆ ಅಂದರೆ ಸರಿಯಲ್ಲ. ನಿ.ಡಿ **4** ರಂತೆ ನನ್ನ ತಾಯಿ ಹೆಸರು **4** ಎಕರೆ **4** ಗುಂಟೆ ಜಮೀನು ಪಹಣಿ ಪತ್ರಿಕೆಗಳಲ್ಲಿದೆ. **1** ಗುಂಟೆ ಪಹಣಿ ಪತ್ರಿಕೆಗಳಲ್ಲಿ ಕಡಿಮೆ ಆದ ಬಗ್ಗೆ ಕಂದಾಯ ಅಧಿಕಾರಿಗಳನ್ನು ವಿಚಾರಣೆ ಮಾಡಿರುತ್ತೇನೆ. ಹಾಗೂ ಆ ಬಗ್ಗೆ ಪ್ರತ್ಯೇಕ ಪಹಣಿ ಹಾಜರುಪಡಿಸಿರುತ್ತೇನೆ. ಕ್ಷೇತ್ರ **35** ಗುಂಟೆ ಮತ್ತು ಪೋರ್ಟ ಖರಾಬ ಜಮೀನು **1** ಎಕರೆ **5** ಗುಂಟೆ ಹೀಗೆ ಒಟ್ಟು **2** ಎಕರೆ ಜಮೀನಿನ ಮಾಲ್ಕಿ ಮತ್ತು ಸ್ವಾಧೀನತೆ **1** ನೇ ಪ್ರತಿವಾದಿ ಹೊಂದಿದ್ದ ಅಂದರೆ ಸರಿ . ನನ್ನ ತಾಯಿ ಸರ್ವೆ ನಂಬರ **405** ರಲ್ಲಿ ಇರುವ ಕ್ಷೇತ್ರ **6** ಎರಕೆ **5** ಗುಂಟೆ ಜಮೀನಲ್ಲಿ ದಿಃ **20-05-2010** ರಂದು **4** ಎಕರೆ **5** ಗುಂಟೆ ಖರೀದಿ ಮಾಡಿರುತ್ತಾರೆ. ನಿ.ಡಿ **36** ರಲ್ಲಿ ನಾವು ಖರೀದಿನಿಸಿದ ಜಮೀನು ಸರ್ವೆ ನಂಬರ **405/2** ಬಿ ಕ್ಷೇತ್ರ **6** ಎಕರೆ **5** ಗುಂಟೆಯಲ್ಲಿ **5** ಗುಂಟೆ ಜಮೀನು ಪೋರ್ಟ ಖರಾಬ ತೋರಿಸಿರುತ್ತಾರೆ ಅಂದರೆ ಸರಿ . ಅದರಲ್ಲಿ ನನ್ನ ತಾಯಿ **4** ಎಕರೆ **5** ಗುಂಟೆ ಜಮೀನು ಖರೀದಿಸಿರುತ್ತಾರೆ ಅಂದರೆ ಸರಿ . ಶಾರದಾಬಾಯಿ , ಭಾರತೀಬಾಯಿ ಮತ್ತು ಜಮುನಾಬಾಯಿ ಇವರಿಗೆ ಕೇಃತ್ರ **4** ಎಕರೆ **5** ಗುಂಟೆ ಇತ್ತು , ನನ್ನ ತಾಯಿಗೆ ಖರೀದಿ ಪತ್ರ ಮಾಡಿಕೊಡುವ ಕಾಲಕ್ಕೆ **6** ಎಕರೆ **5** ಗುಂಟೆ ಮಾಲೀಕರು ಎಂದು ಖರೀದಿ ಪತ್ರದಲ್ಲಿ ತೋರಿಸಿದ್ದು ಉಳಿದ **2** ಎಕರೆ ಕ್ಷೇತ್ರ ಎಲ್ಲಿಂದ ಬಂತು ಅಂದರೆ ಸಾಕ್ಷಿ **1** ನೇ ಪ್ರತಿವಾದಿಯಿಂದ ಬಂದಿರುತ್ತದೆ ಎಂದು ಹೇಳುತ್ತಾರೆ. ಆ ಬಗ್ಗೆ **1** ನೇ ಪ್ರತಿವಾದಿ ಸದರಿ ಶಾರದಾಬಾಯಿ , ಭಾರತೀಬಾಯಿ ಮತ್ತು ಜಮುನಾಬಾಯಿ ಇವರಿಗೆ ಹಕ್ಕು ಬಿಟ್ಟುಕೊಟ್ಟಿದ್ದು ಇರುತ್ತದೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಿಪಡಿಸಿರುತ್ತೇನೆ.

<u>(ಈ ಹಂತದಲ್ಲಿ ಶ್ರೀ ಆರ ಐ ಎಂ ವಕೀಲರು ಮುಂದುವರಿದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು)</u>

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿ ಗಣಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಮ್.ಎಫ್.ಸಿ. ಸಿಂದಗಿ.